# ಕನ್ನಡದ ಹುಡುಗ 'ರಾಜು'

ಬದುಕಲಿಕ್ಕೆ ಬೇಕಾದ ಮಾನಸಿಕ ಗಟ್ಟಿತನವನ್ನು ಕಲಿಸದ ಶಿಕ್ಷಣ ವ್ಯವಸ್ಥೆಯನ್ನು ಟೀಕಿಸುತ್ತಲೇ ಪ್ರೇಕ್ಷಕರಿಗೆ ಕಚಗುಳಿ ನೀಡಿದ್ದ ಸಿನಿಮಾ 'ಫಸ್ಟ್ ರ್‍ಯಾಂಕ್ ರಾಜು'. ಆ ತಂಡದ ನಾಯಕ–ನಿರ್ದೇಶಕನನ್ನು ಒಳಗೊಂಡ ಮತ್ತೊಂದು ಸಿನಿಮಾ ಈಗ ಸುದ್ದಿಯಲ್ಲಿದೆ. ಚಿತ್ರದ ಹೆಸರು 'ರಾಜು – ಕನ್ನಡ ಮೀಡಿಯಂ'. ಇದಕ್ಕೆ ಮೊದಲು 'ರಾಜು ರಂಗಿತರಂಗ' ಎನ್ನುವ ಶೀರ್ಷಿಕೆ ಹೊಂದಿದ್ದ ಈ ಸಿನಿಮಾ, ಈಗ ರಾಜು ಜೊತೆಗೆ ಕನ್ನಡ ಮೀಡಿಯಂ ಅಂಟಿಸಿಕೊಂಡು ರೂಪುಗೊಳ್ಳುತ್ತಿದೆ.

ಕಥೆಗೂ 'ಕನ್ನಡ ಮೀಡಿಯಂ' ಎನ್ನುವ ವಿಶೇಷಣಕ್ಕೂ ಸಂಬಂಧ ಇದೆಯಂತೆ. 'ಫಸ್ಟ್ ರ್‍ಯಾಂಕ್ ರಾಜು' ಚಿತ್ರದ ನಾಯಕ ಗುರುನಂದನ್ ಕನ್ನಡ ಮೀಡಿಯಂನಲ್ಲೂ ನಾಯಕ. ಆವಂತಿಕಾ ಶೆಟ್ಟಿ ಚಿತ್ರದ ನಾಯಕಿ. ಪ್ರೇಮ–ಹಾಸ್ಯದ ಜುಗಲಬಂದಿಯ ಈ ಸಿನಿಮಾ ಮುಖ್ಯವಾಗಿ ಯುವ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಳ್ಳುತ್ತಿದೆ.

ಕಿರಣ್ ರವೀಂದ್ರನಾಥ್ ಸಂಗೀತ, ಶೇಖರ್‌ಚಂದ್ರ ಛಾಯಾಗ್ರಹಣ ಇರುವ ಸಿನಿಮಾದ ಶೂಟಿಂಗ್ ಮುಕ್ತಾಯವಾಗಿದ್ದು, ಹಾಡುಗಳ ಚಿತ್ರೀಕರಣವಷ್ಟೇ ಬಾಕಿಯಿದೆ. ವಿದೇಶದಲ್ಲಿ ಹಾಡುಗಳನ್ನು ಅದ್ದೂರಿಯಾಗಿ ಚಿತ್ರಿಸುವ ಯೋಚನೆ ಚಿತ್ರದ ನಿರ್ದೇಶಕ ನರೇಶ್ ಅವರದು. ಫೆಬ್ರುವರಿ ಕೊನೆಯಲ್ಲಿ ಅಥವಾ ಮಾರ್ಚ್‌ನಲ್ಲಿ 'ರಾಜು – ಕನ್ನಡ ಮೀಡಿಯಂ' ತೆರೆಕಾಣಲಿದೆ.





# ನಭಾ ರೂಪಾಂತರದ 'ಲೀ'

'ವಜ್ರಕಾಯ' ಚಿತ್ರದಲ್ಲಿ ಚಿನಕುರಳಿಯಂತೆ ಕಾಣಿಸಿಕೊಂಡಿದ್ದ ಕನ್ನಡದ ಹುಡುಗಿ ನಭಾ ನಟೇಶ್. ನಂತರದಲ್ಲಿ ಅವರು ಹೆಚ್ಚು ಕಾಣಿಸಿಕೊಂಡಿದ್ದೆಲ್ಲ ಕಿರುತೆರೆಯ ರಿಯಾಲಿಟಿ ಷೋಗಳಲ್ಲಿ, ಅತಿಥಿಯ ರೂಪದಲ್ಲಿ. ಈಗ ನಭಾ ನಾಯಕಿಯಾಗಿ ನಟಿಸಿರುವ 'ಲೀ' ಸಿನಿಮಾ ತೆರೆಕಾಣುತ್ತಿದೆ (ಜ. 13). ಚಿತ್ರ ತೆರೆಕಾಣುತ್ತಿರುವ ಸಂಕ್ರಾಂತಿ ಸಂದರ್ಭ ತಮ್ಮ ವೃತ್ತಿಜೀವನಕ್ಕೂ ಸಂಕ್ರಮಣವಾಗಿ ಪರಿಣಮಿಸಬಹುದು ಎನ್ನುವ ನಿರೀಕ್ಷೆ ಅವರದು.

'ವಜ್ರಕಾಯ' ಚಿತ್ರದ ಪಾತ್ರಗಳನ್ನು ಹೋಲುವ ಅವಕಾಶಗಳೇ ಹೆಚ್ಚು ಎದುರಾದವು. ಒಂದೇ ರೀತಿಯ ಇಮೇಜ್‌ಗೆ ಅಂಟಿಕೊಳ್ಳುವುದು ನನಗೆ ಇಷ್ಟವಿಲ್ಲವಾದುದರಿಂದ ಯಾವ ಅವಕಾಶವನ್ನೂ ಒಪ್ಪಿಕೊಳ್ಳಲಿಲ್ಲ ಎನ್ನುವ ನಭಾ ಅವರಿಗೆ, 'ಲೀ' ಚಿತ್ರದಲ್ಲಿನ ತಮ್ಮ ಪಾತ್ರ ಇಷ್ಟವಾಗಿದೆ. ಹೊಸತನಕ್ಕೆ ಹಂಬಲಿಸುವ ತಮ್ಮ ಮನೋಭಾವಕ್ಕೆ ಈ ಪಾತ್ರ ಪೂರಕವಾಗಿದೆ ಎನ್ನುವ ಅನಿಸಿಕೆ ಅವರದು. ತಮ್ಮ ಹಿಂದಿನ ಚಿತ್ರದ ಗಯ್ಯಾಳಿ ಪಾತ್ರದಿಂದ ಈ ಚಿತ್ರದಲ್ಲಿನ ಸರಳ ಹುಡುಗಿಯ ಪಾತ್ರಕ್ಕೆ ರೂಪಾಂತರವಾಗುವುದು ಅವರಿಗೆ ಸವಾಲೆನ್ನಿಸಿದೆ. ಕನ್ನಡದಲ್ಲಿ ನಟಿಸುತ್ತಲೇ – ತಮಿಳು, ತೆಲುಗು ಸಿನಿಮಾಗಳಲ್ಲಿ ಕೂಡ ನಭಾ ನೆಲೆ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ.

ಎಚ್.ಎಂ. ಶ್ರೀನಂದನ್ 'ಲೀ' ಚಿತ್ರದ ನಿರ್ದೇಶಕರು. ಸುಮಂತ್ ಶೈಲೇಂದ್ರ ಚಿತ್ರದ ನಾಯಕ. ಸುಮಂತ್ ಕೂಡ ಈ ಚಿತ್ರದ ಮೂಲಕ ಯಶಸ್ಸಿನ ನಿರೀಕ್ಷೆಯಲ್ಲಿದ್ದಾರೆ. ಬ್ರೂಸ್ ಲೀ ಅವರನ್ನು ನೆನಪಿಸುವ 'ಲೀ' ಸಾಹಸ ದೃಶ್ಯಗಳಿಗೆ ಒತ್ತುನೀಡಿರುವ ಚಿತ್ರ. ಕರಾಟೆ, ಕುಂಗ್‌ಫೂ ಎಲ್ಲವೂ ಇರುವ ಸಿನಿಮಾ, ಸಾಹಸಪ್ರಿಯರಿಗೆ ಇಷ್ಟವಾಗಲಿದೆ ಎನ್ನುವ ನಿರೀಕ್ಷೆ ನಿರ್ದೇಶಕರದು. ಸಾಹಸದ ಜೊತೆಗೆ ನವಿರು ಹಾಸ್ಯ, ರಮ್ಯ ಪ್ರಣಯ ಹಾಗೂ ಕಚಗುಳಿ ಇಡುವ ಹಾಸ್ಯವೂ ಇದೆಯಂತೆ. ಕೌಟುಂಬಿಕ ಪ್ರೇಕ್ಷಕರು 'ಲೀ'ಯನ್ನು ಮೆಚ್ಚದೆ ಇರಲು ಕಾರಣಗಳಿಲ್ಲ ಎನ್ನುತ್ತಿದೆ ಚಿತ್ರತಂಡ.

■ ರಘು